# ಸ್ಥಳ ತನಿಖಾ ವರದಿ

ಶ್ರೀ. ನಾರಾಯಣ ಡಿ. ನಾಯಕ, ಮೆ:ಶಾಂತಿಕಾ ಕೃಷರ್ಸ್, ಬಾಳೇಗುಳಿ, ಅಂಕೋಲಾ ರವರು ಬಾಳೇಗುಳಿ ಮಾಲ್ಕಿ ಬ್ಲಾಕ್ ನಂ: 1, 2ಎ, 2ಬಿ ಮತ್ತು 3 (ಸರ್ವೆ ನಂ: 1/1 + 1/2, 34, 1/3, 29/2) ರ 1–26–0 ಕ್ಷೇತ್ರದಲ್ಲಿ ಕೃಷರ್ ಘಟಕ ಸ್ಥಾಪಿಸಲು ಬಯಸಿದ ಕ್ಷೇತ್ರಕ್ಕೆ ತಲುಪುವ ಮಾರ್ಗವು ಅರಣ್ಯ ಪ್ರದೇಶದಿಂದ ಹಾದು ಹೋಗುವುದರಿಂದ ರಸ್ತೆ ನಿರ್ಮಿಸಲು ಅರಣ್ಯ ಭೂಮಿ ಬಿಡುಗಡೆ ಕುರಿತು ಅಂತರ ಜಾಲ ತಾಣದ ಮೂಲಕ ಪ್ರಸ್ತಾವನೆ ಸಲ್ಲಿಸಿದಂತೆ ಮಾನ್ಯ ನೋಡಲ್ ಅಧಿಕಾರಿ ಹಾಗೂ ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು, (ಅರಣ್ಯ ಸಂರಕ್ಷಣೆ) ಬೆಂಗಳೂರು ರವರ ಪತ್ರ ಸಂ:ಎ5(2)/ಜಿಎಫ್ಎಲ್/ಸಿಆರ್–1/2015–16 ದಿನಾಂಕ: 06–06–2015 ರ ಪತ್ರದಂತೆ ಅರ್ಜಿದಾರರಿಗೆ ಸದರಿ ಪ್ರಸ್ತಾಪಿತ ಕೃಷರ್ ಘಟಕಕ್ಕೆ ತಲುಪಲು ಪ್ರಸ್ತಾಪಿತ ಮಾರ್ಗವು ಒಂದೇ ಮಾರ್ಗವಾಗಿರುವ ಬಗ್ಗೆ ದೃಢೀಕರಿಸುವ ದಾಖಲಾತಿಗಳೊಂದಿಗೆ ಸಕ್ಷಮ ಪ್ರಾಧಿಕಾರದಿಂದ ಜಂಟಿ ಸ್ಥಳ ಪರಿಶೀಲನೆಯಿಂದ ತಿಳಿಸಲು ಅರ್ಜಿದಾರರಿಗೆ ತಿಳಿಸಿ ಪ್ರತಿಯನ್ನು ಸೂಕ್ತ ಕ್ರಮಕ್ಕಾಗಿ ಈ ಕಚೇರಿಗೆ ಕಳುಹಿಸಿದಂತೆ, ದಿನಾಂಕ: 21–11–2015 ರಂದು ನಾನು ಮತ್ತು ಸಹಾಯಕ ಕಮೀಷನರ್, ಕುಮಟಾರವರು ಜಂಟಿಯಾಗಿ ಸ್ಥಳ ಪರಿಶೀಲಿಸಲಾಗಿ, ಸದರಿ ಸ್ಥಳಕ್ಕೆ ತಲುಪುವ ಮಾರ್ಗವು ಬಾಳೇಗುಳಿ ಘಾ.ಸ.ನಂ:44ಎ (Old Sy.No:2A ) ರಲ್ಲಿ ಮತ್ತು ಪಟ್ಟಾ ಭೂಮಿಯಲ್ಲಿ ಹಾದು ಹೋಗುತ್ತಿದ್ದು, ಅದರ ಉದ್ದವು ಸುಮಾರು 829 ಮೀಟರ್ ಆಗಿದ್ದು, ಅದರಲ್ಲಿ 768 ಮೀಟರ್ ಮಾರ್ಗವು ಬಾಳೇಗುಳಿ ಘಾ.ಸ.ನಂ:44ಎ (Old Sy.No:2A) ರಲ್ಲಿ ಹಾದು ಹೋಗಿರುತ್ತದೆ. ಹಾಗೂ ಸದರ ಕ್ಷೇತ್ರವು ಕಾಯ್ದಿಟ್ಟ ಮೈನರ್ ಫಾರೆಸ್ಟ ಪ್ರದೇಶವಾಗಿದ್ದು, ಬಾಳೇಗುಳಿ ಮಾಲ್ಕಿ ಬ್ಲಾಕ್ ನಂ: 1, 2ಎ, 2ಬಿ ಮತ್ತು 3 (ಸರ್ವೆ ನಂ: 1/1 + 1/2, 34, 1/3, 29/2) ರಲ್ಲಿ ಪ್ರಸ್ತಾಪಿತ ಕೃಷರ್ ಕ್ಷೇತ್ರಕ್ಕೆ ತಲುಪಲು ಇದೇ ಮಾರ್ಗವಾಗಿರುತ್ತದೆ. ಸದರ ಕ್ಷೇತ್ರದ ವಿವರವು ಈ ಕೆಳಗಿನಂತಿರುತ್ತದೆ. ಕೃಷರ್ ಘಟಕ ಸ್ಥಾಪಿಸಲು ಬಯಸಿದ ಕ್ಷೇತ್ರವು ಮೇಲ್ನೋಟಕ್ಕೆ ಮಾಲ್ಕಿ ಪ್ರದೇಶವಾಗಿ ಕಂಡು ಬರುತ್ತದೆ. ಆದಾಗ್ಯೂ ಸದರ ಕ್ಷೇತ್ರದ ಮಾಲೀಕತ್ವದ ಕುರಿತು ಇನ್ನೊಮ್ಮೆ ಖಾತ್ರಿ ಪಡಿಸಿಕೊಳ್ಳಬೇಕಾಗಿರುತ್ತದೆ.

| | | | | | |
|---|---|---|---|---|---|
| 1 | R1 to R2 | 76.00 | Mtr. | RF | ಸದರಿ ಕ್ಷೇತ್ರದಲ್ಲಿ ಈಗಾಗಲೇ ಸಾರ್ವಜನಿಕರು ಉಪಯೋಗಿಸುತ್ತಿರುವ ರಸ್ತೆ ಇರುತ್ತಿದ್ದು, ಸದರ ರಸ್ತೆಯನ್ನು ನಕಾಶೆಯಲ್ಲಿ ನಮೂದಿಸಿರುವುದಿಲ್ಲ. ಸದರ ಕ್ಷೇತ್ರದಲಿ ಗಿಡ ಮರಗಳಿರುವುದಿಲ್ಲ. |
| 2 | R2 to R3 | 199.00 | Mtr. | RF | |
| 3 | R3 to R4 | 128.00 | Mtr. | RF | |
| 4 | R4 to R5 (Patta) | 61.00 | Mtr. | PATTA | ಸದರ ಭೂಮಿಯು ಖಾಸಗಿ ಭೂಮಿಯಾಗಿರುತ್ತದೆ. |
| 5 | R5 to R6 | 35.00 | Mtr. | RF | ಸದರ ಕ್ಷೇತ್ರವು ಈ ಹಿಂದೆ ಲಾಗಿಂಗ್ ಕಾಮಗಾರಿ ನಡೆಯುತ್ತಿರುವ ಕಾಲಕ್ಕೆ ನಿರ್ಮಿಸಿದ ಕಚ್ಚಾ ರಸ್ತೆಯಾಗಿರ ಬಹುದಾಗಿದ್ದು, ಸದರ ಕ್ಷೇತ್ರದಲ್ಲಿ ಅಲ್ಲಲ್ಲಿ ಚಿಕ್ಕಪುಟ್ಟ ಗಿಡಮರಗಳಿರುತ್ತವೆ. |
| 6 | R6 to R7 | 167.00 | Mtr. | RF | |
| 7 | R7 to R8 | 163.00 | Mtr. | RF | |
| | ***Total Land*** | ***829.00*** | **Mtr.** | ***RF*** | |
| | ***Total Forest Land*** | ***768.00*** | **Mtr.** | | |

ಪ್ರಸ್ತಾಪಿತ ಕೃಷರ್ ಘಟಕ ಕ್ಷೇತ್ರಕ್ಕೆ ತಲುಪಸಲು ಅರಣ್ಯ ಪ್ರದೇಶದಲ್ಲಿ ಸುಮಾರು 768 ಮೀ. ಉದ್ದ x 4 ಮೀ. ಅಗಲದಲ್ಲಿ ರಸ್ತೆಗಾಗಿ 0.307 ಹೆಕ್ಟೇರ್ ಅರಣ್ಯ ಭೂಮಿಯು ಬೇಕಾಗುತ್ತದೆ.

ಸಹಾಯಕ ಕಮೀಷನರ್,
ಕುಮಟಾ.

ಉಪ ಅರಣ್ಯ ಸಂರಕ್ಷಣಾಧಿಕಾರಿ,
ಕಾರವಾರ ವಿಭಾಗ,ಕಾರವಾರ.

ದಿನಾಂಕ:23–12–2015